

# ನಕ್ಕುಬಿಡಿ..!

## ನೋಡ್ಬೇಕು



ಡಾಕ್ಟರ್: ನೋಡಿ, ಈಗ ನೀವು ಬದುಕೋದು ಎರಡು ಗಂಟೆಗಳ ಕಾಲ ಮಾತ್ರ. ಅಷ್ಟರಲ್ಲಿ ನೀವು ಯಾರ್‍ಯಾರನ್ನು ನೋಡ್ಬೇಕೋ ಅವರನ್ನೆಲ್ಲ ನೋಡಿ ಬಿಡಿ.'

ರೋಗಿ: ನಾನು ಒಬ್ರನ್ನು ಮಾತ್ರ ನೋಡ್ಬೇಕು..

ಡಾಕ್ಟರ್: ಯಾರನ್ನು?

ರೋಗಿ: ಒಬ್ಬ ಒಳ್ಳೆ ಡಾಕ್ಟರನ್ನು!

★★★



## ಉಚಿತ ಸಲಹೆ

ಮಂಟಾ: ನಾನು ನನ್ನ ಹೆಂಡತಿಯನ್ನು ಪಿಯುಸಿ ಓದಿಸಿದೆ, ನಂತರ ಬಿ.ಎ. ಮಾಡಿಸಿದೆ, ಆಮೇಲೆ ಎಂ.ಎ. ಮಾಡಿಸಿದೆ. ಸರ್ಕಾರಿ ನೌಕರಿಯನ್ನೂ ಕೊಡಿಸಿದೆ. ಈಗ ಮುಂದೆ ಏನು ಮಾಡಿಸಲಿ?

ಗೆಳೆಯ: ಒಬ್ಬ ಒಳ್ಳೆಯ ಹುಡುಗನನ್ನು ನೋಡಿ ಮದ್ವೆ ಮಾಡಿಸು!

## 400 ಕೊಡಿ

ಗುಂಡ: ವಿಕ್ಸ್ ಆಕ್ಷನ್–500 ಗೆ ಎಷ್ಟು?

ಅಂಗಡಿಯವ: 2.50 ರೂಪಾಯಿ.

ಗುಂಡ: ನನ್ನತ್ರ ಬರೀ ಎರಡು ರೂಪಾಯಿ ಇದೆ. ವಿಕ್ಸ್ ಆಕ್ಷನ್–400 ಕೊಡಿ ಸಾಕು!

★★★



## ಗೋರಿಯಲ್ಲಿ

ಸ್ಮಶಾನದಲ್ಲಿ ಒಂದು ಗೋರಿಯ ಮೇಲೆ ಬರೆದಿದ್ದು:

'ನಾನು ಅಂತಿಮವಾಗಿ ಸೇರಬೇಕಾದ್ದು ಇಲ್ಲಿಯೇ. ಇಲ್ಲಿಯವರೆಗೆ ಬರೋ ತನಕ 'ಜೀವನ' ಕಳೆದ್ಹೋಯ್ತು!'

★★★

## ಎಲ್ಲ ನೋಡ್ತಾರೆ

ನಾನು ದುಃಖದಲ್ಲಿ ಅತ್ತಾಗ ನನ್ನ ಕಣ್ಣೀರನ್ನು ಯಾರೂ ನೋಡಲಿಲ್ಲ.

ನಾನು ಸುಸ್ತಾದಾಗ ಯಾರೂ ನನ್ನ ನೋವನ್ನು ಕಾಣಲಿಲ್ಲ.

ನಾನು ಸಂತೋಷದಲ್ಲಿ ನಕ್ಕಾಗ ಯಾರೂ ನೋಡಲಿಲ್ಲ ನನ್ನ ನಗುವನ್ನು.

ನಾನು ಒಂದು ಸುಂದರ ಹುಡುಗಿಯೊಡನೆ ನಡೆಯುತ್ತಿದ್ದಾಗ–

'ಬಡ್ಡಿ ಮಕ್ಳು.. ಎಲ್ಲಾ ನೋಡ್ತಾರೆ!'

★★★



## ತಗೋ ರೂಪಾಯಿ

ಪ್ರೇಯಸಿ: ನಾನು ಮನೆಯಿಂದ ಬರುವಾಗ ಪರ್ಸ್ ಮರೆತುಬಿಟ್ಟಿದ್ದೇನೆ. ನನಗೆ ಈಗಲೆ 1000 ರೂಪಾಯಿ ಬೇಕು, ಕೊಡು, ತುಂಬಾ ಅರ್ಜೆಂಟು!

ಪ್ರಿಯಕರ: ಇಗೋ ಈ ಹತ್ತು ರೂಪಾಯಿ ತಗೊ. ಆಟೋ ಹತ್ತಿ ಮನೆಗೆ ಹೋಗಿ ಪರ್ಸ್ ತಗೊಂಬಾ!

★★★

## ಮಿರರ್ ಎಡ್ಜಸ್ಟ್‌ಮೆಂಟ್

ಒಮ್ಮೆ ಮಂಟಾ ಸಿಂಗ್ ಹೆಂಡತಿಯೊಡನೆ ಪೇಟೆಗೆ ಹೋಗಲು ಆಟೋ ಹತ್ತಿದ. ಆಟೋ ಡ್ರೈವರ್ ಕನ್ನಡಿ ಸರಿಪಡಿಸಿಕೊಂಡ. ಇದನ್ನು ಗಮನಿಸಿದ ಸರ್ದಾರ್ಜಿ ಸಿಟ್ಟಿನಿಂದ ಅರಚಿದ.

'ಏನೋ ನನ್ನ ಹೆಂಡತಿಯ ಕಡೆಗೆ ಮಿರರ್ ಅಡ್ಜಸ್ಟ್ ಮಾಡ್ತೀಯಾ? ಹಿಂದೆ ಕೂತ್ಕೊ, ನಾನೇ ಡ್ರೈವ್ ಮಾಡ್ತೀನಿ!'

★★★

## ರೋಮ್ಯಾಂಟಿಕ್

ಮಂಟಾ ಮತ್ತು ಬಂಟಾ ಮಧ್ಯೆ ಜಗಳ ನಡೆಯುತ್ತಿತ್ತು.

ಮಂಟಾ: ಮಗನೇ, ನಿನ್ನ ಬಟ್ಟೆ ಎಲ್ಲಾ ಹರಿದು ನಿನ್ನನ್ನು ಬೆತ್ತಲೆ ನಿಲ್ಲಿಸ್ತೀನಿ..

ಬಂಟಾ: ನೋಡು, ನಾನು ಸೀರಿಯಸ್ಸಾಗಿ ಜಗಳ ಮಾಡ್ತಾ ಇರುವಾಗ ರೋಮ್ಯಾಂಟಿಕ್ಕಾಗಿ ಮಾತಾಡ್ಬೇಡ!

ಸಂಗ್ರಹ: ರೋಹಿಣಿ ಹತ್ವಾರ್, ತೆಕ್ಕಟ್ಟೆ